| Publication: | Prajavani | Edition: | Bangalore |
|---|---|---|---|
| Published Date: | 22 July 2017 | Page No.: | 3 |
| | | Display: | 1/1 |


# ಐ.ಟಿ ರಸಪ್ರಶ್ನೆ ಆಗಸ್ಟ್ 3ರಂದು

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಆಶ್ರಯದಲ್ಲಿ 'ಟಿಸಿಎಸ್ ಐ.ಟಿ ಕ್ವಿಜ್–2017' ನಗರದ ವೈಯಾಲಿಕಾವಲ್‌ನ ಚೌಡಯ್ಯ ಸಭಾಂಗಣದಲ್ಲಿ ಆಗಸ್ಟ್ 3ರಂದು ನಡೆಯಲಿದೆ.

ಇದರಲ್ಲಿ ಪಾಲ್ಗೊಳ್ಳಲು ಪ್ರವೇಶ ಶುಲ್ಕ ಇರುವುದಿಲ್ಲ. 8ನೇ ತರಗತಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರತಿ ಶಿಕ್ಷಣ ಸಂಸ್ಥೆಯು 10 ತಂಡಗಳನ್ನು (ಪ್ರತಿ ತಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು) ಕಳುಹಿಸಬಹುದು.

ಪ್ರವೇಶ ಅರ್ಜಿಯನ್ನು ಸಂಸ್ಥೆಗಳು ಜುಲೈ 29ರೊಳಗೆ 'ಟಿಸಿಎಸ್ ಐ.ಟಿ ಕ್ವಿಜ್ ಸಂಯೋಜಕರು, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್‌ಐಎಂ ಟವರ್, 18, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು-560009' ಗೆ ಕಳುಹಿಸಬೇಕು.

ಮಾಹಿತಿಗೆ: 080-67246000